ಶಾಲಾ ಹಾಗೂ ಕಿರಿಯ ಕಾಲೇಜುಗಳಲ್ಲಿ ಭರ್ತಿಯಾಗದೆ ಉಳಿದಿರುವ ಬೋಧಕೇತರ ಸಿಬ್ಬಂದಿ ಕುರಿತು.

41(352) ಶ್ರೀ ರಾಜಶೇಖರ್ ಶೀಲವಂತ ವೀರಣ್ಣ (ಗುಳ್ಳೇದಗುಡ್ಡ):— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಶಾಲಾ ಹಾಗೂ ಕಿರಿಯ ಕಾಲೇಜುಗಳಲ್ಲಿ ಭರ್ತಿ ಆಗದೇ ಉಳಿದಿರುವ ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಸದರಿ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇವೆ?

ಇ) ಈ ಹುದ್ದೆಗಳನ್ನು ತುಂಬಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಈ) ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಹೆಚ್.ಜ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):—

ಅ) ಪ್ರ.ದ.ಸ. 292
ದ್ವಿ.ದ.ಸ. 79
ಸಿ.ಸಿ.ಟಿ. 49
ಗ್ರೂಪ್ -ಡಿ 978
(ಜಿಲ್ಲಾವಾರು ವಿವರ ಲಗತ್ತಿಸಿದೆ)

ಆ) ಈ ಹುದ್ದೆಗಳು ಸುಮಾರು ವರ್ಷಗಳಿಂದ ಖಾಲಿ ಇವೆ.

ಇ) ಗ್ರೂಪ್-ಡಿ ಹುದ್ದೆಗಳನ್ನು ತುಂಬಲು 1986 ರಿಂದ ಆರ್ಥಿಕ ಮಿತವ್ಯಯ ಜಾರಿಯಲ್ಲಿರುವುದರಿಂದ ಸರ್ಕಾರವು ಈ ಹುದ್ದೆಗಳನ್ನು ತುಂಬಲು ಸಾಧ್ಯವಾಗಿರುವುದಿಲ್ಲ. ಉಳಿದ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಯಾಗುವ ಅಭ್ಯರ್ಥಿಗಳಿಂದ ನೇಮಕ ಮಾಡಬೇಕಾಗಿದ್ದು ಲೋಕಸೇವಾ ಆಯೋಗವು ಪಟ್ಟಿಯನ್ನು ಕಳುಹಿಸಿದ ನಂತರ ತುಂಬಲಾಗುವುದು. ಆದರೂ ಮೇಲ್ಕಂಡ ಹುದ್ದೆಗಳನ್ನು ಅನುಕಂಪದ ಆಧಾರದ ನೇಮಕಾತಿ ಮೂಲಕ, ಬಡ್ತಿಯ ಮೂಲಕ ಹಾಗೂ ವರ್ಗಾವಣೆಯ ಮೂಲಕ ತುಂಬಲಾಗುತ್ತಿದೆ.

ಈ) ಆದಷ್ಟು ಬೇಗನೆ ಭರ್ತಿ ಮಾಡಲಾಗುವುದು.

ಖಾಲಿ ಹುದ್ದೆಗಳ ಜಿಲ್ಲಾವಾರು ಪಟ್ಟಿ

ಕ್ರ.ಸಂ.	ಜಿಲ್ಲೆಯ ಹೆಸರು	ಖಾಲಿ ಇರುವ ಪ್ರ.ದ.ಸ.ಸಂ.	ದ್ವಿ.ದ.ಸ. ಸಂಖ್ಯೆ	ಸಿ.ಸಿ.ಟಿ. ಸಂಖ್ಯೆ	ಗ್ರೂಪ್ 'ಡಿ' ಸಂಖ್ಯೆ
1)	ತುಮಕೂರು	11	—	—	75
2)	ಚಾಮರಾಜನಗರ	05	01	01	13
3)	ಬಾಗಲಕೋಟೆ	11	—	04	30
4)	ಬೆಳಗಾವಿ	12	03	02	12
5)	ಕೊಡಗು	04	05	05	37
6)	ಬೆಂಗಳೂರು ಗ್ರಾಮಾಂತರ	03	—	—	18
7)	ಮಂಡ್ಯ	21	03	03	—
8)	ರಾಯಚೂರು	13	01	01	46
9)	ಬಿಜಾಪುರ	05	—	—	32
10)	ಹಾಸನ	28	06	04	46
11)	ಹಾವೇರಿ	09	02	—	31
12)	ಉಡುಪಿ	12	10	02	59
13)	ಕೋಲಾರ	20	—	03	71
14)	ಚಿತ್ರದುರ್ಗ	12	02	02	20
15)	ಮೈಸೂರು	16	03	03	24
16)	ದಾವಣಗೆರೆ	04	03	—	36
17)	ಬೀದರ್	24	03	02	08
18)	ಗುಲ್ಬರ್ಗಾ	28	10	—	34
19)	ಗದಗ್	07	04	—	05
20)	ಶಿವಮೊಗ್ಗ	04	04	08	39
21)	ಚಿಕ್ಕಮಗಳೂರು	18	02	06	08
22)	ಬೆಂಗಳೂರು ಉತ್ತರ	—	—	01	32
23)	ಬೆಂಗಳೂರು ದಕ್ಷಿಣ	02	—	—	24
24)	ಕೊಪ್ಪಳ	03	01	—	08
25)	ಬಳ್ಳಾರಿ	03	—	—	24
26)	ಧಾರವಾಡ	02	—	—	12
27)	ಉತ್ತರ ಕನ್ನಡ	06	—	—	37
28)	ದಕ್ಷಿಣ ಕನ್ನಡ (ಮಂಗಳೂರು)	12	07	06	195
	ಒಟ್ಟು	292	79	49	976